**ಸಾಕ್ಷಿಯನ್ನು ದಿಃ 27.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನಾನು 30 ವರ್ಷಗಳಿಂದ 3 ನೇ ಎದುರುದಾರರ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪ್ರಸ್ತುತ ಡಿಪಾರ್ಟ್ಮೆಂಟ್ ನಲ್ಲಿ ಎರಡು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 1 ನೇ ಎದುರುದಾರರ ವಾಹನಕ್ಕೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು. ಅಂತಿಮ ವರದಿಯಲ್ಲಿ 1 ನೇ ಎದುರುದಾರರ ಮೇಲಿಯೂ ಸಹ ಪ್ರಕರಣ ದಾಖಲಾಗಿದೆ ಎಂದರೆ ಸರಿ. 2 ನೇ ಎದುರುದಾರರಿಗೆ ಪಾಲಿಸಿಯಲ್ಲಿರುವ ವಿಳಾಸಕ್ಕೆ ನೋಟೀಸ್ ಕಳುಹಿಸಿದ್ದೇವೆ. ಸದರಿ ನೋಟೀಸ್ ಅವರಿಗೆ ತಲುಪದೆ ಇರುವ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. 2 ನೇ ಎದುರುದಾರರ ಹಾಲಿ ವಿಳಾಸವನ್ನು ಪತ್ತೆ ನೋಟೀಸ್ ನೀಡಲು ಪ್ರಯತ್ನಿಸಿಲ್ಲ. ಆ ರೀತಿ ಪ್ರಸ್ತುತ ವಿಳಾಸವನ್ನು ಪತ್ತೆ ಹಚ್ಚಲು ತೊಂದರೆ ಇಲ್ಲ. ಅರ್ಜಿದಾರರು ಪ್ರಸ್ತುತ ಅರ್ಜಿಯಲ್ಲಿ 2 ನೇ ಎದುರುದಾರರ ಈಗಿನ ವಿಳಾಸ ನೀಡಿದ್ದು ಅದಕ್ಕೆ ನ್ಯಾಯಾಲಯದ ಸಮನ್ಸ್ ಜಾರಿಯಾಗಿದೆ ಎಂದರೆ ಗೊತ್ತಿಲ್ಲ. ನನಗೆ 2 ನೇ ಎದುರುದಾರರ ಈಗಿನ ವಿಳಾಸ ಗೊತ್ತಿದ್ದರೂ ಸಹ ಆ ವಿಳಾಸಕ್ಕೆ ನೋಟೀಸ್ ಕಳುಹಿಸಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರು ದಾರರಿಗೆ ಚಾಲನ ಪರವಾನಗಿ ಇದ್ದರೂ ಸಹ ಪರಿಹಾರದ ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ಅವರಿಗೆ ಚಾಲನ ಪರವಾನಗಿ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಮಾ ಪಾಲಿಸಿ ಚಾಲ್ತಿಯಲ್ಲಿರುವ ಕಾರಣ ನಾವು ಪರಿಹಾರ ನೀಡಲು ಭಾದ್ಯರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.